# ವಿಶ್ವನಂದಿನಿ ಲೇಖನಮಾಲೆ — 131

## ನಗುವರಲ್ಲೋ ರಂಗಯ್ಯ ನಿನ್ನಾಟವ ಕಂಡು

ವೇದಶಾಸ್ತ್ರಗಳು ಹೇಳುವ ಒಂದೊಂದು ತತ್ವಕ್ಕೆ ದೃಷ್ಟಾಂತವಾಗಿ ಅವತರಿಸಿಬಂದವರು ನಮ್ಮ ಪರಮಾದ್ಭುತಪರಂಪರೆಯ ಮಹಾಜ್ಞಾನಿಗಳು. ಅವರ ಜೀವನವನ್ನು ಅಧ್ಯಯನ ಮಾಡುತ್ತ ಕುಳಿತರೆ ನಮಗೆ ಶಾಸ್ತ್ರ ತತ್ವಗಳಿಗೆ ದೃಷ್ಟಾಂತಗಳು ದೊರಕುತ್ತವೆ, ಶಾಸ್ತ್ರ ಅರ್ಥವಾಗಿದ್ದರೆ ಮಾತ್ರ ಅವರ ಬದುಕು ಅರ್ಥವಾಗುತ್ತದೆ.

ಪರಮಾತ್ಮ ಯಾಕಾಗಿ ಈ ಸೃಷ್ಟಿಯನ್ನು ಮಾಡುತ್ತಾನೆ ಎನ್ನುವದಕ್ಕೆ ಶ್ರೀಮದಾಚಾರ್ಯರು ನೀಡಿದ ಒಂದು ಉತ್ತರ — **"ತನುಭೃತ್ಸ್ವಭಾವಸಂಭೂತಯೇ"** ಎಂದು. ಜೀವರಾಶಿಗಳು ಸಂಸಾರದ ಆವರಣದಲ್ಲಿದ್ದಾರೆ. ಪರಮಾತ್ಮನ ಭಕ್ತರು ಜ್ಞಾನ ಆನಂದಸ್ವರೂಪರು. ಅವರ ಸ್ವರೂಪದಲ್ಲಿ ದುಃಖ ದುಮ್ಮಾನಗಳಿಲ್ಲ. ಆದರೆ, ಒಮ್ಮೆ ಸಂಸಾರಕ್ಕೆ ಬಂದು ಆ ನಂತರ

ಸ್ವಭಾವದ ಅನಾವರಣ ಮಾಡಿಕೊಳ್ಳುವದು ಅವರ ಸ್ವಭಾವದಲ್ಲಿಯೇ ಸೇರಿದ ಅಂಶ. ಬಂಗಾರದಲ್ಲಿ ಕೊಳೆ ಇಲ್ಲ. ಆದರೆ ಹೊರಗಿನ ಕಾರಣಗಳಿಂದ ಕೊಳೆ ಮೆತ್ತಿಕೊಂಡಿದೆ. ಆ ಕೊಳೆಯನ್ನು ಕಳೆದುಕೊಂಡರೆ ಅಪ್ಪಟ ಅಪರಂಜಿಯಾಗುತ್ತೇವೆ. ಮೆತ್ತಿಕೊಂಡಿರುವ ಕೊಳೆಯನ್ನು ಕಳೆಯುವದಕ್ಕಾಗಿಯೇ ಪರಮಾತ್ಮ ಸೃಷ್ಟಿಯನ್ನು ಮಾಡುತ್ತಾನೆ.

ಕೊಳೆ ಎಂದರೆ ಪಾಪಗಳು, ಅಜ್ಞಾನ. ಅದು ಕಳೆಯಬೇಕಾದರೆ ಸತ್ಕರ್ಮಗಳ ಅನುಷ್ಠಾನ ಮಾಡಬೇಕು. ಗಂಗಾದಿ ತೀರ್ಥಗಳನ್ನು ಸೇವಿಸಬೇಕು. ಶಾಸ್ತ್ರಗಳನ್ನು ಅಧ್ಯಯನ ಮಾಡಬೇಕು. ಶಾಸ್ತ್ರದ ಅಧ್ಯಯನ ಮಾಡಿಸಲಿಕ್ಕೆ ಗುರುಗಳು ಬೇಕು. ಅದಕ್ಕಾಗಿ  ಪಾಂಚಭೌತಿಕ ದೇಹ ಬೇಕು. ದೇಹ ಬೇಕೆಂದರೆ ಅದು ತಯಾರಾಗುವ ಈ ಭೂಮಿ, ನೀರು, ಗಾಳಿ, ಆಕಾಶ, ಬೆಂಕಿಗಳು ಬೇಕು. ಇವು ಬೇಕೆಂದರೆ ಬ್ರಹ್ಮಾಂಡ ಸೃಷ್ಟಿಯಾಗಬೇಕು. ಬ್ರಹ್ಮಾಂಡ ಸೃಷ್ಟಿಯಾಗಬೇಕೆಂದರೆ ಭಗವಂತ ಅದರ ಕಚ್ಚಾವಸ್ತುವಾದ  ತತ್ವಗಳನ್ನು ಸೃಷ್ಟಿ ಮಾಡಬೇಕು.

ಶ್ರೀಹರಿ ತತ್ವಗಳನ್ನು ಸೃಜಿಸಿ, ಅವುಗಳಿಂದ ಬ್ರಹ್ಮಾಂಡವನ್ನು ಸೃಷ್ಟಿಮಾಡಿ, ಆ ಬ್ರಹ್ಮಾಂಡದಲ್ಲಿ ಬ್ರಹ್ಮದೇವರಿಂದ ಹದಿನಾಲ್ಕು ಲೋಕಗಳನ್ನು ಸೃಷ್ಟಿ ಮಾಡಿಸಿ, ಆ ಬ್ರಹ್ಮದೇವರಿಗೆ ವೇದಗಳನ್ನು ನೀಡಿ, ಸ್ವಯಂ ತಾನೇ ನಾನಾರೂಪಗಳಿಂದ ಆ ವೇದಗಳ ಅರ್ಥವನ್ನು ತಿಳಿಸಿ ಹೇಳಿ, ಬ್ರಹ್ಮದೇವರಿಂದ ದೇವತೆಗಳಿಗೂ, ದೇವತೆಗಳಿಂದ ಋಷಿಗಳಿಗೂ, ಋಷಿಗಳಿಂದ ಮನುಷ್ಯರಿಗೂ ತತ್ವಗಳನ್ನು ಬೋಧಿಸುತ್ತಾನೆ. ನಂತರ ಭಕ್ತರಿಂದ ಸತ್ಕರ್ಮಗಳ ಅನುಷ್ಠಾನಗಳನ್ನು ಮಾಡಿಸಿ, ಅವರ ಪಾಪಗಳನ್ನು ಕಳೆದು ಅವರನ್ನು ಭವಬಂಧದಿಂದ ದೂರ ಮಾಡುತ್ತಾನೆ.

ಇದು ಪರಮಾತ್ಮನ ಲೀಲೆಯ ಒಂದು ಸಂಕ್ಷಿಪ್ತ ಪರಿಚಯ.

ಆದರೆ, ಈ ಪ್ರಕ್ರಿಯೆ ಅತ್ಯಂತ ವಿಸ್ತೃತವಾದದ್ದು. ಸಂಸಾರದಲ್ಲಿ ಬಿದ್ದಿರುವ ನಾವು, ನಮ್ಮ ವಿಪರೀತ ಅಜ್ಞಾನದಿಂದ, ರಜೋಗುಣದ, ತಮೋಗುಣದ ಪ್ರಭಾವಗಳಿಂದ, ನಮ್ಮ ಸುತ್ತಮುತ್ತಲಿನ ಪರಿಸರದ ಪ್ರಭಾವದಿಂದ, ನಮ್ಮಿಂದ

ದುಷ್ಟಕರ್ಮಗಳನ್ನು ಮಾಡಿಸಿ ನಮಗೆ ದುಃಖವನ್ನುಂಟುಮಾಡುವದರಿಂದ ಪೈಶಾಚಿಕ ಆನಂದವನ್ನು ಅನುಭವಿಸುವ ಅಸುರರ ಪ್ರಭಾವದಿಂದ ಮಹತ್ತರ ಅಪರಾಧಗಳನ್ನು ಎಸಗುತ್ತಿರುತ್ತೇವೆ. ಹೀಗಾಗಿ ಸಾಧನ ಮಾರ್ಗದಲ್ಲಿ ಪ್ರವೇಶ ಪಡೆಯುವದು ಅತ್ಯಂತ ದುಸ್ತರ. ಪಡೆದ ಮೇಲೂ ಆ ಮಾರ್ಗದಲ್ಲಿ ನಿರಾತಂಕವಾಗಿ ನಡೆಯುವದು ಇನ್ನೂ ದುಸ್ತರ.

ಆದರೆ, ಇದಕ್ಕೆ ವಿರುದ್ಧವಾಗಿ ಪರಮಾತ್ಮನ ಕಾರುಣ್ಯ, ದೇವತೆಗಳ ಅನುಗ್ರಹ ಮತ್ತು ನಮ್ಮ ಪ್ರೀತಿಯ ಗುರುಗಳ ವಾತ್ಸಲ್ಯ ಇವೆ. ಈ ಕಂಟಕಗಳನ್ನು ದೂರಮಾಡಲೆಂದೇ ಇರುವ ಸಾಧನಪ್ರಪಂಚದ ಬಂಗಾರದ ವಸ್ತುಗಳವರು.

ನಾವು ದಾರಿ ತಪ್ಪಿದಾಗಲೆಲ್ಲ, ನಮ್ಮನ್ನು ಎಚ್ಚರಿಸುತ್ತಾರೆ. ನಾವು ಮಾರ್ಗದಲ್ಲಿ ನಡೆಯುವಾಗ ನಾವು ಎಡವಿಬಿದ್ದರೆ, ವಾತ್ಸಲ್ಯದಿಂದ ನಮ್ಮನ್ನು ಮೈದಡವಿ ಎಬ್ಬಿಸುತ್ತಾರೆ. ಊರ್ಧ್ವಮುಖಿಯಾಗಿ ಸಾಧನಮಾರ್ಗದಲ್ಲಿ ಏರುತ್ತಿರುವ ನಾವು ಕ್ಷುದ್ರ ಸಾಂಸಾರಿಕ ಪದಾರ್ಥಗಳನ್ನು ಅಪೇಕ್ಷೆ ಪಟ್ಟರೆ

ಕಾರುಣ್ಯದ ಆ ಹರಿ-ವಾಯು-ದೇವತಾ-ಗುರುಗಳು ನಮ್ಮ ಮೇಲಿನ ಪೂರ್ಣ ಕಾರುಣ್ಯದಿಂದ ಅವನ್ನೂ ಅನುಗ್ರಹಿಸುತ್ತಾರೆ. ಸಾಧನಮಾರ್ಗದಲ್ಲಿ ನಮ್ಮೊಂದಿಗೆ ಹೆಜ್ಜೆ ಹಾಕುವ ನಲ್ಮೆಯ ಮಡದಿ, ನಮ್ಮನ್ನು ಸಾಧನ ಮಾರ್ಗದಲ್ಲಿರಿಸುವ ತಂದೆತಾಯಿಗಳು, ನಮ್ಮಿಂದ ಸಾಧನೆಯನ್ನು ಮಾಡಿಸುವ ಸಾತ್ವಿಕ ಸಂಪತ್ತು ಎಲ್ಲವನ್ನೂ ಅನುಗ್ರಹಿಸುತ್ತಾರೆ. ಅಂತೂ ನಮ್ಮನ್ನು ಕಣ್ರೆಪ್ಪೆಯಂತೆ ಕಾಪಿಡುತ್ತ ನಮ್ಮನ್ನು ಭವಬಂಧದಿಂದ ಬಿಡಿಸುತ್ತಾರೆ.

ಇಲ್ಲಿ ಒಂದು ಮಹತ್ತರ ಪ್ರಶ್ನೆಯಿದೆ. ಆ ತಾತ್ವಿಕ ಪ್ರಶ್ನೆಗೆ ಉತ್ತರವಾಗಿ ನಮ್ಮ ಮಾನವಿಯ ರಂಗವೊಲಿದ ದಾಸರ — ಶ್ರೀ ಜಗನ್ನಾಥದಾಸರ — ಜೀವನಚರಿತ್ರೆಯಿದೆ.

ಪರಮಾತ್ಮನಿಗೆ ನಾವು ಉದ್ಧಾರವಾಗುವದೇ ಅಪೇಕ್ಷೆ ಇದ್ದರೆ, ನಾವು ಭವಬಂಧನದಿಂದ ಮುಕ್ತರಾಗುವದೇ ಬೇಕಾಗಿದ್ದರೆ ಅವನ್ಯಾಕೆ ಈ ಮಾರ್ಗವನ್ನು ಇಷ್ಟು ಕಠಿಣ ಮಾಡಬೇಕಿತ್ತು. ಅಸುರರಲ್ಲಿ ನಿಂತು ಅವರಿಂದ ನಮ್ಮನ್ನು ದಾರಿ

ತಪ್ಪಿಸುವವನೂ ಅವನೇ, ರಜೋಗುಣ ತಮೋಗುಣಗಳ ಪ್ರಭಾವವನ್ನು ನಮ್ಮ ಮೇಲೆ ಮಾಡಿಸುವವನೂ ಅವನೇ, ನಮ್ಮಲ್ಲಿ ಅಜ್ಞಾನವನ್ನಿಟ್ಟವನೂ ಅವನೇ, ಆ ಅಜ್ಞಾನ, ತಮೋಗುಣ, ಅಸುರಾವೇಶಗಳಿಂದ ನಮ್ಮಿಂದ ದುಷ್ಕರ್ಮಗಳನ್ನು ಮಾಡಿಸುವವನೂ ಅವನೇ, ಆ ಬಳಿಕ ನಮ್ಮಲ್ಲಿ ಪಶ್ಚಾತ್ತಾಪ ಮೂಡಿಸಿ ನಮ್ಮಿಂದ ಪ್ರಾಯಶ್ಚಿತ್ತ ಮಾಡಿಸುವವನೂ ಅವನೇ, ನಮ್ಮಲ್ಲಿ ನಿಂತು ತನ್ನ ಪ್ರಾರ್ಥನೆಯನ್ನು ನುಡಿಸುವವನೂ ಅವನೇ, ಆ ಬಳಿಕ ಕಾರುಣ್ಯದಿಂದ ಅದನ್ನು ಕ್ಷಮಿಸಿ ನಮ್ಮನ್ನು ಉದ್ಧರಿಸುವವನೂ ಅವನೇ.

ವಿಚಿತ್ರವಾಯಿತಲ್ಲ, ಇದು. ಯಾಕೀ ದ್ರಾವಿಡ ಪ್ರಾಣಾಯಾಮ?

ಉತ್ತರ ಅದ್ಭುತವಾಗಿದೆ, ಉತ್ತರವನ್ನು ಅನುಭವಿಸಿದ ಶ್ರೀ ಜಗನ್ನಾಥದಾಸರ ಜೀವನವೂ ಅದ್ಭುತವಾಗಿದೆ.

ನೋಡಿ, ನಾವು ಮುಕ್ತಿಯನ್ನು ಪಡೆಯುವದು ಎಂದರೆ ನಮ್ಮ ಸ್ವಭಾವದ ಅನಾವರಣವನ್ನು

ಮಾಡಿಕೊಳ್ಳುವದು ಎಂದು ಹಿಂದೆ ತಿಳಿದೆವು. ಶ್ರೀಮದಾಚಾರ್ಯರು ಹೇಳುತ್ತಾರೆ — **ಮುಕ್ತಿಃ ಸ್ವರೂಪೇಣ ವ್ಯವಸ್ಥಿತಿಃ.** ನಮಗೆ ಮೆತ್ತಿರುವ ಎಲ್ಲ ಕೊಳೆಗಳನ್ನು ಕಳೆದುಕೊಂಡು, ನಮ್ಮ ಮೇಲಿರುವ ಆವರಣಗಳನ್ನು ಕಳಚಿಕೊಂಡು ನಾವು ನಾವಾಗುವದೇ ಮುಕ್ತಿ ಎಂದು.

ಈ ಆವರಣಗಳನ್ನು ಕಳಚಿಕೊಳ್ಳುವದು ಎನ್ನುವದು ಒಂದು ಕಟ್ಟಕಡೆಯ ಕ್ಷಣದ ಪ್ರಕ್ರಿಯೆ ಅಲ್ಲ. ಇಡಿಯ ಸಂಸಾರದಲ್ಲಿ ನಿರಂತರವಾಗಿ ನಡೆಯುವ ಪ್ರಕ್ರಿಯೆ.

ನಾವು ಸ್ವರೂಪದಲ್ಲಿ ಅಹಂಕಾರಿಗಳಲ್ಲ. ಆದರೆ ಸಂಸಾರದಲ್ಲಿ ದುರಹಂಕಾರಿಗಳಾಗಿದ್ದೇವೆ. ಈ ದುರ್ಗುಣ ನೀಗಬೇಕು.

ನಮ್ಮ ಸ್ವರೂಪದಲ್ಲಿ ದುಷ್ಟಕಾಮವಿಲ್ಲ, ಆದರೆ ಸಂಸಾರದಲ್ಲಿ ಕೀಳುಕಾಮುಕರಾಗಿದ್ದೇವೆ. ಈ ದುರ್ಗುಣ ನೀಗಬೇಕು.

ನಮ್ಮ ಸ್ವರೂಪದಲ್ಲಿ ದುಷ್ಟಕ್ರೋಧವಿಲ್ಲ, ಆದರೆ ನಾವು ಸಿಟ್ಟಿನ ಮೂರ್ತಿಮತ್ತಾದ ರೂಪವಾಗಿದ್ದೇವೆ. ಈ ದುರ್ಗುಣ ನೀಗಬೇಕು.

ನಾವು ಸ್ವರೂಪದಲ್ಲಿ ಅಜ್ಞಾನಿಗಳಲ್ಲ. ಆದರೆ ನಾವು ಈಗ ಅಜ್ಞಾನದ ಸಮುದ್ರದಲ್ಲಿ ವಿಹರಿಸುತ್ತಿದ್ದೇವೆ. ಈ ದುರ್ಗುಣ ನೀಗಬೇಕು.

ಹೀಗೆ, ಲೋಭ, ಮೋಹ, ಮದ, ಮಾತ್ಸರ್ಯ ಮುಂತಾದ ಎಲ್ಲವೂ ನಮಗೆ ಮೆತ್ತಿರುವ ಕೊಳೆಗಳು. ಅವು ಕಳೆಯಬೇಕಾಗಿದೆ. ಅವುಗಳನ್ನು ಕಳೆಯಲು ಪರಮಾತ್ಮ ಈ ತಮೋಗುಣ, ಅಸುರರು ಎಲ್ಲರನ್ನೂ ಇಟ್ಟಿದ್ದಾನೆ.

ಈ ಬಾಹ್ಯ ಕಾರಣಗಳ ಮುಖಾಂತರ ನಾವು ಆ ದುರ್ಗುಣಗಳನ್ನು ಪ್ರದರ್ಶಿಸುತ್ತೇವೆ. ಆ ದುರ್ಗುಣಗಳು ಬೃಹದಾಕಾರವಾಗಿ ಬೆಳೆದು ನಿಲ್ಲುತ್ತವೆ. ಬೆಳೆದು ನಿಂತಾಗ ಪರಮಾತ್ಮ ಒಬ್ಬ ಮಹಾನುಭಾವರ ಮುಖಾಂತರ ಆ ದುರ್ಗುಣವನ್ನು ಬುಡ ಸಮೇತ ಕಿತ್ತು ಹಾಕುತ್ತಾನೆ. ಸಾಧನ ಜೀವನದಲ್ಲಿ ಮತ್ತೊಮ್ಮೆ ಆ ದುರ್ಗುಣ ನಮ್ಮನ್ನು ಕಾಡಿಸದ ಹಾಗೆ ನೋಡಿಕೊಳ್ಳುತ್ತಾನೆ.

ಶ್ರೀ ಜಗನ್ನಾಥದಾಸರು (ಶ್ರೀ ಶ್ರೀನಿವಾಸಾಚಾರ್ಯರು) ಬಾಲ್ಯದಿಂದ

ಶ್ರೀಮದಾಚಾರ್ಯರ ಶಾಸ್ತ್ರದ ಅಧ್ಯಯನ ಮಾಡಿದ್ದವರು. ದಿವ್ಯ ಪಾಂಡಿತ್ಯ. ಆದರೆ, ಆ ಪಾಂಡಿತ್ಯದ ಜೊತೆಯಲ್ಲಿ ಸಾಕಷ್ಟು ಅಹಂಕಾರವೂ ಮನೆ ಮಾಡಿರುತ್ತದೆ. ದಾಸಸಾಹಿತ್ಯದ ದಿವ್ಯ ಅಚ್ಚರಿಯಾದ ಶ್ರೀ ವಿಜಯದಾಸರು ಬದುಕುತ್ತಿದ್ದ ಕಾಲವದು. ಆದರೆ, ಈ ಪಂಡಿತೋತ್ತಮರಾದ ಶ್ರೀನಿವಾಸಾಚಾರ್ಯರಿಗೆ ಈ ಕನ್ನಡದ ಹಾಡು, ಭಜನೆ ಎಂದರೆ ತಿರಸ್ಕಾರ. ಅಸುರಾವೇಶದ ಪ್ರಭಾವ ಎಷ್ಟರ ಮಟ್ಟಿಗೆ ಬೆಳೆದಿರುತ್ತದೆ ಎಂದರೆ ಅವರು ಒಮ್ಮೆ ಶ್ರೀ ವಿಜಯದಾಸರನ್ನು ತುಂಬ ತುಚ್ಛವಾಗಿ ನಿಂದಿಸಿಬಿಡುತ್ತಾರೆ. ಆದರೆ ಆ ಪರಮಾತ್ಮ **"ತಾಳ ತನ್ನವರಲ್ಲಿ ಮಾಡುವ ಹೇಳನವ"** ಎಂದಿಗೂ ತನ್ನ ಭಕ್ತರಿಗೆ ಆಗುವ ಅವಮಾನವನ್ನು ಸಹಿಸುವದಿಲ್ಲ. ಗುರುನಿಂದೆ ಮಹತ್ತರ ಪಾಪ. ನಾವು ಏನಾದರೂ ಪಾಪ ಮಾಡಿದರೆ ಅದರ ಫಲವನ್ನು ಪರಮಾತ್ಮ ಮುಂದಿನ ಜನ್ಮಗಳಲ್ಲಿ ನೀಡುತ್ತಾನೆ. ಪಾಪ ಮಾಡಿದ ಜನ್ಮದಲ್ಲಿಯೇ ನೀಡುವದಿಲ್ಲ. ಆದರೆ ಅತ್ಯುತ್ಕಟವಾದ ಪಾಪಗಳನ್ನು ಮಾಡಿದಲ್ಲಿ ಪರಮಾತ್ಮ ಇದೇ ಜನ್ಮದಲ್ಲಿಯೇ ಶಿಕ್ಷೆ

ನೀಡಿಬಿಡುತ್ತಾನೆ ಎನ್ನುತ್ತಾರೆ ಶ್ರೀಮದಾಚಾರ್ಯರು — **ಅತ್ಯುತ್ಕಟೈಃ ಪುಣ್ಯಪಾಪೈಃ ಇಹೈವ ಫಲಮಶ್ನುತೇ** ಎಂದು. ಮಹಾನುಭಾವರಾದ ಶ್ರೀ ವಿಜಯದಾಸರನ್ನು ತಿರಸ್ಕರಿಸಿದ ಕಾರಣಕ್ಕೆ ಶ್ರೀನಿವಾಸಾಚಾರ್ಯರಿಗೆ ಭಯಂಕರವಾದ ಹೊಟ್ಟೆಯ ನೋವು ಅರಂಭವಾಗುತ್ತದೆ. ಏನನ್ನೂ ಉಣ್ಣಲು ಸಾಧ್ಯವಾಗುತ್ತಿರುವದಿಲ್ಲ. ಭರಿಸಲಾಗದ ನೋವು. ಶ್ರೀನಿವಾಸಾಚಾರ್ಯರು ತುಂಬ ಬಳಲಿ ಬಿಡುತ್ತಾರೆ. ಮಂತ್ರಾಲಯಕ್ಕೆ ತೆರಳಿ ಶ್ರೀ ರಾಘವೇಂದ್ರಸ್ವಾಮಿಗಳ ಸೇವೆ ಆರಂಭಿಸುತ್ತಾರೆ. ಸ್ಮರಿಸಿದವರ ದುಃಖವನ್ನು ನೀಗುವ ಮಂತ್ರಾಲಯದ ಪ್ರಭುಗಳೂ ಕರುಣೆ ತೋರುವದಿಲ್ಲ. ಆದರೆ ಶ್ರೀನಿವಾಸಾಚಾರ್ಯರು ಎಡೆ ಬಿಡದೆ ಸೇವೆ ಮಾಡುತ್ತಾರೆ. ಹೊಟ್ಟೆಯಲ್ಲಿನ ನೋವು ಅವರ ಅಹಂಕಾರವನ್ನು ಕರಗಿಸುತ್ತಿರುತ್ತದೆ. ನಾನು ಮಾಡಿದ ಪಾಪಗಳನ್ನು ಮನ್ನಿಸಿ ಎಂದು ಪರಿಪರಿಯಾಗಿ ಅವರು ರಾಯರನ್ನು ಸೇವಿಸುತ್ತಾರೆ. ಅವರ ಮನಸ್ಸಿನ ಪಕ್ವತೆಯನ್ನು ಮನಗಂಡ ರಾಯರು, ಸ್ವಪ್ನದಲ್ಲಿ ಬಂದು ನೀನು ಮಾಡಿದ್ದು ಸ್ವೋತ್ತಮದ್ರೋಹ,

ಹೀಗಾಗಿ ವಿಜಯದಾಸರ ಬಳಿಗೆ ತೆರಳಿ ಅವರನ್ನು ಒಲಿಸಿಕೋ ಎನ್ನುತ್ತಾರೆ.

ಸ್ವಪ್ನದಲ್ಲಿ ಬಂದು ಉದ್ಧಾರವಾಗುವ ಹಾದಿಯನ್ನು ತೋರಿದ ರಾಯರಿಗೆ ಸಾಷ್ಟಾಂಗವೆರಗಿ ಶ್ರೀನಿವಾಸಾಚಾರ್ಯರು ಆ ದಿವಸವೇ ಮಂತ್ರಾಲಯದಿಂದ ಚೀಕಲಪರವಿಗೆ ಪ್ರಯಾಣ ಬೆಳೆಸುತ್ತಾರೆ. ಯಾವ ವ್ಯಕ್ತಿಯ ಬಗ್ಗೆ ತಿರಸ್ಕಾರವನ್ನು ತಾಳಿದ್ದರೋ, ಅಂತಹ ವ್ಯಕ್ತಿಯನ್ನು ರಾಯರೇ ಮಹಾನುಭಾವರು ಎಂದು ಕರೆದದ್ದನ್ನು ಕಂಡು, ಸರ್ವಸಮರ್ಪಣೆಯ ಭಾವದಿಂದ ಶ್ರೀನಿವಾಸಾಚಾರ್ಯರು ವಿಜಯದಾಸರ ಕಾಲಿಗೆ — ಯಾರು ಹೆಂಗಸರಂತೆ ಕಾಲಿಗೆ ಗೆಜ್ಜೆ ಕಟ್ಟಿ ಕುಣಿಯುತ್ತಾರೆ, ಎಂದು ತಾವು ನಿಂದೆ ಮಾಡಿದ್ದರೋ ಆ ದಾಸರಾಯರ ಗೆಜ್ಜೆ ಕಟ್ಟಿದ ಕಾಲಿಗೇ —  ಎರಗುತ್ತಾರೆ. ಆ ವಾತ್ಸಲ್ಯದ ಮೂರ್ತಿ ವಿಜಯರಾಯರು ತಮ್ಮನ್ನು ನಿಂದೆ ಮಾಡಿದ ಈ ವ್ಯಕ್ತಿಯನ್ನು ತುಚ್ಛವಾಗಿ ಕಾಣುವದಿಲ್ಲ. ಕಾಲಿಗೆರಗಿದ ಅವರನ್ನು ಎಬ್ಬಿಸಿ ಪ್ರೀತಿಯಿಂದ ಆಲಿಂಗಿಸಿಕೊಳ್ಳುತ್ತಾರೆ. ಅವರ ನೋವನ್ನು ಕೇಳಿ ಮರುಗುತ್ತಾರೆ. ತಮ್ಮ ಪ್ರೀತಿಯ ಶಿಷ್ಯರಾದ ಶ್ರೀ

ಗೋಪಾಲದಾಸರಿಗೆ ಇವರ ದುಃಖವನ್ನು ಕಳೆಯಲು ಆದೇಶಿಸುತ್ತಾರೆ. ಗುರುಗಳ ಆಜ್ಞೆಯಂತೆ ಶ್ರೀ ಗೋಪಾಲದಾಸರು ಅವರ ದೇಹದ ಬಾಧೆಯನ್ನು ನಲವತ್ತು ದಿವಸಗಳಲ್ಲಿ ಕಳೆದುಬಿಡುತ್ತಾರೆ.

ಅಷ್ಟೇ ಅಲ್ಲ, ಹಿರಿಯರ ನಿಂದೆಯಿಂದ, ಗುರುಗಳ ನಿಂದೆಯಿಂದ ಆಯುಷ್ಯ ಕ್ಷೀಣವಾಗುತ್ತದೆ ಎಂದು ಶಾಸ್ತ್ರಗಳು ತಿಳಿಸಿಹೇಳುತ್ತವೆ. ಶ್ರೀನಿವಾಸಾಚಾರ್ಯರು ಅಂತಿಂಥಹವರಿಗೆ ಅಪಚಾರ ಮಾಡಿರುವದಿಲ್ಲ. ಶ್ರೀ ವಿಜಯರಾಯರ ನಿಂದೆಯಿಂದ ಅವರ ಆಯುಷ್ಯ ಪೂರ್ಣವಾಗಿ ಕ್ಷೀಣವಾಗುತ್ತದೆ. ಆದರೆ ಶ್ರೀ ಗೋಪಾಲದಾಸರು, ಅನ್ನವೂ ತಿನ್ನಲಿಕ್ಕಾಗದ ಶ್ರೀನಿವಾಸಾಚಾರ್ಯರಿಗೆ, ತಾವೇ ತಮ್ಮ ಕೈಯಿಂದ ಒಂದು ಜೋಳದ ರೊಟ್ಟಿಯನ್ನು ಮಾಡಿಕೊಡುತ್ತಾರೆ. ದೇವರಿಗೆ ನಿವೇದಿಸಿ ಅದನ್ನು ಶ್ರೀನಿವಾಸಾಚಾರ್ಯರಿಗೆ ತಿನ್ನಲು ಹೇಳುತ್ತಾರೆ. ನಲವತ್ತು ದಿವಸ ನಲವತ್ತು ರೊಟ್ಟಿಗಳು. ಅನ್ನವನ್ನೂ ಜೀರ್ಣಿಸಿಕೊಳ್ಳಲಾಗದೇ ಬಾಧೆ ಪಡುತ್ತಿದ್ದ ಶ್ರೀನಿವಾಸಾಚಾರ್ಯರು ರೊಟ್ಟಿಯನ್ನು ತಿಂದು ಗುಣಮುಖರಾಗುತ್ತಾರೆ.

ಆಶ್ಚರ್ಯ ಅದಲ್ಲ, ಸಿದ್ಧಪುರುಷರಾದ ಶ್ರೀಗೋಪಾಲದಾಸರು ತಮ್ಮ ಭಾಗದ ನಲವತ್ತು ವರ್ಷದ ಆಯುಷ್ಯವನ್ನು ಅವರಿಗೆ ನಲವತ್ತು ದಿವಸಗಳಲ್ಲಿ ಧಾರೆಯರೆದು ಬಿಡುತ್ತಾರೆ.

ಧಾರೆಯೆರೆದು, "ದಾಸಸಾಹಿತ್ಯವನ್ನು ಬೆಳೆಸು, ಯಾವ ಹಾಡುಗಳನ್ನು ನಿಂದಿಸಿದ್ದಿಯೋ, ಅದೇ ಹಾಡುಗಳಿಂದ ಹರಿಯನ್ನು ಮೆಚ್ಚಿಸು" ಎಂದು ಶ್ರೀ ವಿಜಯರಾಯರು, ಶ್ರೀ ಗೋಪಾಲದಾಸರು ಆದೇಶಿಸುತ್ತಾರೆ.

ಶ್ರೀ ರಾಘವೇಂದ್ರಸ್ವಾಮಿಗಳ, ಶ್ರೀ ವಿಜಯರಾಯರ, ಶ್ರೀ ಗೋಪಾಲದಾಸರ ವಾತ್ಸಲ್ಯದಲ್ಲಿ ಕಡಲಿನಲ್ಲಿ ಮಿಂದೆದ್ದ ಶ್ರೀನಿವಾಸಾಚಾರ್ಯರು ಪುಟಕ್ಕಿಟ್ಟ ಬಂಗಾರವಾಗಿ ಅಪ್ಪಟ ಅಪರಂಜಿಯಾಗಿ ಹೊರಹೊಮ್ಮುತ್ತಾರೆ. ಅವರ ಆದೇಶದಂತೆ ಪರಮಾದ್ಭುತ ಕೃತಿಗಳಿಂದ ದಾಸಸಾಹಿತ್ಯವನ್ನು ಶ್ರೀಮಂತಗೊಳಿಸಿಬಿಡುತ್ತಾರೆ.

ಶ್ರೀನಿವಾಸಾಚಾರ್ಯರಲ್ಲಿ ಅಸುರಾವೇಶದಿಂದ ಅಹಂಕಾರ ಎಂಬ ಕೊಳೆ ಮೆತ್ತಿತ್ತು. ಭಗವಂತನಿಗೆ

ಅದನ್ನು ತೆಗೆಯಬೇಕಿತ್ತು. ಅದಕ್ಕಾಗಿ ಈ ಲೀಲೆಯನ್ನು ತೋರುತ್ತಾನೆ. ಇವತ್ತು ನಾವೂ ಅಹಂಕಾರಿಗಳಾಗಿದ್ದೇವೆ. ಅಹಂಕಾರ  ಬಿಡು ಎಂದು ಮಾತ್ರಕ್ಕೆ ಬಿಡುತ್ತೇವೆಯೋ, ಸರ್ವಥಾ ಇಲ್ಲ. ಆದರೆ, ಪರಮಾತ್ಮ ನೋಡಿ, ಬಾಯಿಂದ ಹೇಳದೇ, ಶ್ರೀನಿವಾಸಾಚಾರ್ಯರಲ್ಲಿದ್ದ ಅಹಂಕಾರವನ್ನು ಬುಡಸಮೇತ ಕಿತ್ತು ಹಾಕಿಬಿಟ್ಟ.

ಹೀಗೆ, ಭಕ್ತರನ್ನು ಬೀಳಿಸಿ ಎಬ್ಬಿಸುವದೂ ಪರಮಾತ್ಮ ಕಾರುಣ್ಯವೇ. ಕಾರಣ, ಅವನು ನಮ್ಮನ್ನು ಮತ್ತೊಮ್ಮೆ ಬೀಳದಂತೆ ನಡೆಯಲು ಪಾಠ ಕಲಿಸುತ್ತಿದ್ದಾನೆ. ಈ ಸಾಧನ ಮಾರ್ಗ ಆರಂಭದಲ್ಲಿ ಮಾತ್ರ ಈ ಕಲ್ಲು ಮುಳ್ಳಗಳು. ಮುಂದೆ ಅವುಗಳು ಕಡಿಮೆ. ದಾರಿ ನುಣುಪಾಗುತ್ತಿದ್ದಂತೆ ನಮ್ಮ ವೇಗ ಜಾಸ್ತಿಯಾಗಬೇಕು. ಈ ಸಾಧನಮಾರ್ಗದಲ್ಲಿ ನಡೆಯುವದಷ್ಟೇ ಅಲ್ಲ, ಭಾಗವತ ಹೇಳುವಂತೆ ಕಣ್ಮುಚ್ಚಿ ಓಡುವಂತಾಗಬೇಕು. ಕಣ್ಮುಚ್ಚಿ ಓಡಿದರೂ ನಾವು ಬೀಳಬಾರದು. ಆ ಓಟಕ್ಕೆ, ಆ ವೇಗಕ್ಕೆ ಪರಮಾತ್ಮ ನಮ್ಮನ್ನು ಅಣಿಗೊಳಿಸುತ್ತಾನೆ. ಅಹಂಕಾರದ ಬೀಜ ಇದ್ದರೆ ಅದು ಮುಂದೆ ಮತ್ತೆಂದೋ ಮೊಳಕೆಯೊಡೆಯುತ್ತದೆ.

ಹಾಗಾಗಬಾರದು. ಅದು ಬುಡಸಮೇತ ವಿನಾಶವಾಗಬೇಕು ಎಂದು ಪರಮಾತ್ಮ ಈ ರೀತಿ ಸಮೂಲವಾಗಿ ನಿರ್ಮೂಲ ಮಾಡುತ್ತಾನೆ. ಅಹಂಕಾರವನ್ನು ಶ್ರೀನಿವಾಸಾಚಾರ್ಯರಿಂದ ಪೂರ್ಣವಾಗಿ ದೂರ ಮಾಡಲೇ ಅವರಿಗೆ ಪರ್ವತದಷ್ಟು ಅಹಂಕಾರವನ್ನು ನೀಡಿದ.

ಅವನ ಕಾರುಣ್ಯ ಎಷ್ಟು ದೊಡ್ಡದು ಎಂದರೆ ಅವರ ಅಹಂಕಾರದಿಂದ ವಿಚಲಿತರಾಗಿ ಶಾಪ ನೀಡುವವರನ್ನು ಅವರ ಮುಂದೆ ನಿಲ್ಲಿಸಲಿಲ್ಲ ಭಗವಂತ. ವಾತ್ಸಲ್ಯದ ಮೂರ್ತಿಗಳಾದ ಶ್ರೀ ವಿಜಯರಾಯರನ್ನಿಟ್ಟ. ಅವರ ಕಾರುಣ್ಯವನ್ನು ಅನುಭವಿಸಿದ ಶ್ರೀ ಶ್ರೀನಿವಾಸಾಚಾರ್ಯರು ತಮ್ಮ ತಪ್ಪನ್ನು ಕ್ಷಮಿಸಿ ಎಂದು ಮನಃಪೂರ್ವಕವಾಗಿ ಯಾಚಿಸಿ ತಮ್ಮನ್ನು ತಾವು ಅವರ ಪಾದಕ್ಕೆ ಸಮರ್ಪಿಸಿಕೊಂಡಿಬಿಟ್ಟರು. ಕಾರುಣ್ಯದ ಆ ವಿಜಯರಾಯರು ಅವರನ್ನು ಕ್ಷಮಿಸಿ, ಶಿಷ್ಯನ ಮುಖಾಂತರ ಅವರನ್ನು ಉದ್ಧರಿಸಿ, ಅವರಿಗೆ ನಲವತ್ತು ವರ್ಷಗಳ ಆಯುಷ್ಯದ ದಾನವನ್ನು ಮಾಡಿಸಿ ಪರಮಾತ್ಮನ ಅಡಿದಾವರೆಗಳಲ್ಲಿ ಅವರನ್ನು ಕುಸುಮವನ್ನಾಗಿ ಸಮರ್ಪಿಸಿದರು.

ಪರಮಾತ್ಮನ ಈ ಲೀಲೆಯನ್ನು ಮನಗಂಡ ವಿಜಯದಾಸರು ಹೇಳಿದರು — ಪರಮಾತ್ಮ ನಿಮ್ಮ ಮೇಲೆ ಪೂರ್ಣ ಒಲಿದಿದ್ದಾನೆ, ಅವನ ಒಲುಮೆಯಿಂದ ನಿಮ್ಮ ಅಹಂಕಾರ ನೀಗಿದೆ. ಹೀಗಾಗಿ ರಂಗನೇ ಒಲಿದ ದಾಸರು ನೀವು, ರಂಗವೊಲಿದ ದಾಸರು.

ಆ ರಂಗವೊಲಿದ ದಾಸರ — ಶ್ರೀಜಗನ್ನಾಥ ದಾಸರಾಯರ — ಪರಮಪವಿತ್ರ ಆರಾಧನೆ ಭಾದ್ರಪದ ಶುದ್ಧ ನವಮಿಯಂದು. ದೇವರ ಕಾರುಣ್ಯಕ್ಕೆ, ಗುರುಗಳ ವಾತ್ಸಲ್ಯಕ್ಕೆ ಪಾತ್ರರಾದ, ಶಾಸ್ತ್ರ ಹೇಳಿದ ತತ್ವಕ್ಕೆ ದೃಷ್ಟಾಂತವಾಗಿ ನಿಂತ ಆ ಶ್ರೀ ಜಗನ್ನಾಥದಾಸರ ಚರಣಕಮಲಗಳಿಗೆ ಭಕ್ತಿಪೂರ್ಣ ಸಾಷ್ಟಾಂಗನಮಸ್ಕಾರಗಳನ್ನು ಸಲ್ಲಿಸಿ, ನನ್ನ ಸರ್ವಸ್ವವನ್ನೂ ಅವರ ಪಾದಕ್ಕೊಪಿಸಿಕೊಳ್ಳುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491